# ಸಾಂಸ್ಕೃತಿಕ ಅನುಸಂಧಾನಕ್ಕೆ ವೇದಿಕೆ

ಸಾಂಸ್ಕೃತಿಕ ಮಾಸಪತ್ರಿಕೆಯಾದ ನಿಮ್ಮ 'ಮಯೂರ'ಕ್ಕೆ ಸಮಕಾಲೀನ ಸಂಗತಿಗಳನ್ನು ಒಳಗೊಳ್ಳುವ ತಹತಹ ನಿರಂತರವಾಗಿ ಇರುತ್ತದೆ. ಸೃಜನಶೀಲ ಸಾಹಿತ್ಯದ ಜೊತೆಗೆ ರಂಗಭೂಮಿ, ಚಲನಚಿತ್ರ, ಸಂಗೀತ, ಚಿತ್ರಕಲೆ ಹೀಗೆ ಹಲವು ರಂಗಗಳನ್ನು ಕುರಿತ ಮಾಹಿತಿಪೂರ್ಣ, ವಿಚಾರಪೂರ್ಣ ಬರಹಗಳನ್ನು ಓದುಗರ ಮುಂದಿಡುತ್ತಿರುವುದರಲ್ಲಿ ಇದು ಸುವ್ಯಕ್ತ.

ಇದರೊಂದಿಗೆ ಸಮಕಾಲೀನ ಸಂಗತಿಗಳ ಸಾಂಸ್ಕೃತಿಕ– ಸಾಮಾಜಿಕ ಅನುಸಂಧಾನಕ್ಕೆ ವೇದಿಕೆ ಒದಗಿಸುವ ಜವಾಬ್ದಾರಿಯೂ ತನ್ನದೆಂದು 'ಮಯೂರ' ಭಾವಿಸಿದೆ. ಆದ್ದರಿಂದಲೇ ತಾತ್ವಿಕ ಚಿಂತನೆಯುಳ್ಳ, ಓದುಗರ ಪ್ರಜ್ಞಾವಲಯವನ್ನು ವಿಸ್ತರಿಸುವ ಬರಹಗಳಿಗೂ ಪ್ರಾಶಸ್ತ್ಯ ಇರುತ್ತದೆ. ಈ ದಿಸೆಯಲ್ಲಿ, ಭಾರತದಲ್ಲಿ ವಿಶಿಷ್ಟ ಸಾಮಾಜಿಕ ಸಂದರ್ಭದಲ್ಲಿ ಉದಯಿಸಿದ ದಲಿತ ಸಾಹಿತ್ಯದ ಅವಲೋಕನ, ಅದರ ಸದ್ಯದ ಸ್ಥಿತಿಯ ಮೌಲ್ಯಮಾಪನ ಅಗತ್ಯವೆನಿಸಿದೆ. ಕನ್ನಡ, ಮರಾಠಿ, ತೆಲುಗು, ತಮಿಳು ಮುಂತಾದ ಭಾಷೆಗಳ ದಲಿತ ಸಾಹಿತ್ಯವನ್ನು ಕುರಿತು ಪ್ರಮುಖ ಚಿಂತಕರು, ವಿಮರ್ಶಕರು ಲೇಖನಗಳನ್ನು ಬರೆಯಲಿದ್ದಾರೆ. ಜಾಗತೀಕರಣದ ಹಿನ್ನೆಲೆಯೂ ಸೇರಿ ಹಲವು ಕಾರಣಗಳಿಂದ ದಲಿತ ಸಂವೇದನೆ, ದಲಿತ ಚಳವಳಿಗಳ ಬಗ್ಗೆ ಚಿಂತನೆ ಬದಲಾಗುತ್ತಿರುವ ಈ ಸಂದರ್ಭದಲ್ಲಿ, ದಲಿತ ಸಾಹಿತ್ಯದ ನೆಲೆಬೆಲೆಯನ್ನು ಈ ಲೇಖನಮಾಲೆ ವಿವೇಚಿಸಲಿದೆ. ಸಮಕಾಲೀನ ಸಾಹಿತ್ಯ ಚರಿತ್ರೆ ಮತ್ತು ಸಾಹಿತ್ಯ ವಿಮರ್ಶೆಗೆ ಇದು ಒಳ್ಳೆಯ ಪರಿಕರಗಳನ್ನು ಒದಗಿಸಬಹುದು ಎಂಬ ನಿರೀಕ್ಷೆಯಿದೆ.

'ಮಯೂರ'ದ ಎಲ್ಲ ಅಂಕಣಗಳಿಗೆ ಓದುಗರಾದ ನೀವು ತೋರುತ್ತಿರುವ ಆದರ ನಮಗೆ ತುಂಬಾ ಸಂತೋಷ ಕೊಡುತ್ತಿದೆ. ಕೆಲವು ಅಂಕಣಗಳು ನಿಜಕ್ಕೂ ಜನಪ್ರಿಯವಾಗಿವೆ ಎಂಬುದು ಪ್ರತಿಕ್ರಿಯೆಗಳ ಪ್ರಮಾಣದಿಂದಲೇ ತಿಳಿದು ಬರುತ್ತಿದೆ. ಅಲ್ಲದೆ 'ಸಖೀಗೀತ'ಕ್ಕೆ ನಾವೂ ಬರೆಯುತ್ತೇವೆ ಎಂದು ಕೆಲವು ಹಿರಿಯ ಸಾಧಕರು ತಾವಾಗಿ ಹೇಳುತ್ತಿರುವುದು ಈ ಅಂಕಣಕ್ಕೆ ಸಿಕ್ಕ ಮನ್ನಣೆ ಎಂದೇ ಭಾವಿಸುತ್ತೇವೆ.

ಕನ್ನಡದಲ್ಲಿ ಬರೆಯುತ್ತಿರುವ ಕಥೆಗಾರ್ತಿಯರ ವಸ್ತುವಿನ ಆಯ್ಕೆಯಲ್ಲಿ ಆಗುತ್ತಿರುವ ಬದಲಾವಣೆ ಯಾರ ಗಮನವನ್ನಾದರೂ ಸೆಳೆಯುವಂತಿದೆ. ಈ ಸಂಚಿಕೆಯಲ್ಲಿನ ಕೆಲವು ಕಥೆಗಳೂ ಅದಕ್ಕೆ ನಿದರ್ಶನವಾಗಿವೆ. ಆದರೂ ವೈಜ್ಞಾನಿಕ, ಮನೋವೈಜ್ಞಾನಿಕ ಮತ್ತು ಪತ್ತೇದಾರಿ ವಸ್ತುಗಳ ಗರಿಮುರಿ ಕಥೆಗಳಿಗೆ 'ಮಯೂರ' ಕಾಯುತ್ತಿದೆ!

◆ ಆರ್. ಪೂರ್ಣಿಮಾ